† SRI C. N. PATIL.—It fell vacant on 16-6-1976 due to the retirement of the presiding officer.

ಶ್ರೀ ಎಂ. ಎಸ್. ಕೃಷ್ಣನ್.—ಹಾಗಾದರೆ ಆ ಪೋಸ್ಟ್ ಖಾಲಿ ಬಿದ್ದು ೫ ತಿಂಗಳುಗಳಾಗಿದ್ದರೂ ಇನ್ನೂ ಏತಕ್ಕೆ ಭರ್ತಿ ಮಾಡಿಲ್ಲ ? ಅಲ್ಲಿಗೆ ಒಬ್ಬ ಅಧಿಕಾರಿಯನ್ನು ನೇಮಕ ಮಾಡುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ?

SRI C. N. PATIL.—We have been in correspondence with the High Court. If they spare we can fill it up. If the High Court do not spase, we are helpless.

ಶ್ರೀ ಎಂ. ಎಸ್. ಕೃಷ್ಣನ್.—ಪ್ರತ್ಯೇಕ ಕೆಡರ್ ಮಾಡಬೇಕೆಂದು ಇದರ ಬಗ್ಗೆ ರಾಜ್ಯದ ಟ್ರೇಡ್ ಯೂನಿಯನ್‌ರವರೂ, ಮತ್ತಿತರ ವರ್ಗದವರೂ ಕೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಸಿ. ಎನ್. ಪಾಟೀಲ್.—ಸ್ಟೇಟ್ ಲೆವಲ್‌ನಲ್ಲಿ ಈ ತರಹದ ಪರಿಸ್ಥಿತಿ ಇದ್ದಾಗ್ಯೂ ನ್ಯಾಶನಲ್ ಲೆವಲ್ ನಲ್ಲಿ ಆದಕ್ಕೆ ಬೆಂಬಲ ಇಲ್ಲದೇ ಇರುವುದರಿಂದ ಆದಕ್ಕೆ ಬೆಂಬಲ ದೊರಕದೇ ಇರುವಂತಾಗಿದೆ.

ಶ್ರೀ ಎಂ ಎಸ್. ಕೃಷ್ಣನ್.—ನ್ಯಾಶನಲ್ ಲೆವಲ್ ನಲ್ಲಿ ನನಗೆ ತಿಳಿದ ಮಟ್ಟಿಗೆ ಇಂಥ ಪರಿಸ್ಥಿತಿ ಇಲ್ಲ ವೆಂದಂಸ್ಪಷ್ಟವಾಗಿ ಹೇಳಬಹುದಾಗಿದೆ. ಆದರೆ ಇಲ್ಲಿ ನ್ಯಾಶನಲ್ ಲೆವಲ್‌ನ ಪರಿಸ್ಥಿತಿಯಂ ಪ್ರಶ್ನೆಯಲ್ಲ. ಒಂದೊಂದು ರಾಜ್ಯದಲ್ಲಿ ಒಂದೊಂದು ತರಹದ ಪರಿಸ್ಥಿತಿ ಇರುತ್ತದೆ. ಲೇಬರ್ ಕೋರ್ಟಿಗೂ ಮತ್ತು ಇಂಡಸಿ ಯಲ್ ಟ್ರಿಬ್ಯೂನಲ್ಸ್‌ಗೂ ಪ್ರತ್ಯೇಕ ಜ್ಯುಡಿಶಿಯಲ್ ಕೇಡರ್ ಇರುವುದು ಒಳ್ಳೆಯದು ಇದರ ಬಗ್ಗೆ ತಾವು ಸ್ವಲ್ಪ ಪರಿಶೀಲನೆ ಮಾಡಿ ತೀರ್ಮಾನವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಸಿ. ಎನ್. ಪಾಟೀಲ್.—ಮಾನ್ಯ ಸದಸ್ಯರ ಸಲಹೆಯನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದು.

Aerodrome at Bellary

313. SRI B. E. RAMAIAH (Siruguppa).—Will the Minister for Public Works be pleased to state:—

(*a*) the extent of land reserved for the Aerodrome at the time of British Rule for Military use at Bellary ;

(*b*) the purpose for which the land is used at present ;

(*c*) whether the Government intends to recommend to the Central Government to convert the Aerodrome as a regular Aerodrome?

SRI M. MALLIKARJUNASWAMY (Minister for Public Works).—

(*a*) 169.94 acres.

(*b*) This is being nsed as 'Air Strip' for military purpose.

(*c*) This will be considered.

ಶ್ರೀ ಜಿ. ಇ. ರಾಮಯ್ಯ.—ಸ್ವಾಮಿ, ಸುಮಾರು ೧೭೦ ಎಕರೆ ಜಮೀನು ಇದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಹಾಗಾದರೆ ವಿಮಾನ ನಿಲ್ದಾಣವನ್ನು ಸ್ಥಾಪನೆ ಮಾಡಬೇಕಾದರೆ ಎಷ್ಟು ಎಕರೆ ಬೇಕಾಗುತ್ತದೆ ?

† ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಗೌವರ್ನಮೆಂಟ್ ಆಫ್ ಇಂಡಿಯಾದ ಸಿವಿಲ್ ಏವಿಯೇಷನ್ ಡಿಪಾರ್ಟ್‌ಮೆಂಟಿನವರು ಹೇಳುವಷ್ಟು ಬೇಕಾಗುತ್ತದೆ,

ಶ್ರೀ ಬಿ. ಇ. ರಾಮಯ್ಯ.—ಅಂದಾಜು ಎಷ್ಟು ಬೇಕಾಗುತ್ತದೆಂದು ನನ್ನ ಪ್ರಶ್ನೆ.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅಂದಾಜು ಎಷ್ಟು ಎಂದರೆ, ಅಲ್ಲಿಗೆ ಎಷ್ಟು ವಿಮಾನಗಳು ಹೋಗುತ್ತವೆ ಎನ್ನುವುದರ ಮೇಲೆ ಅದೆಲ್ಲಾ ಅನ್ವಯಿಸಲಾಗಿರುತ್ತದೆ.

ಶ್ರೀ ಬಿ. ಇ. ರಾಮಯ್ಯ.—ಈಗ ವಿಜಯ ನಗರ ಸ್ಟೀಲ್ ಪ್ಲಾಂಟ್, ಬಳ್ಳಾರಿಯ ಹತ್ತಿರ ಆಗುತ್ತಿರುವುದರಿಂದ ಅಲ್ಲಿಗೆ ವಿಮಾನ ನಿಲ್ದಾಣ ಆಗುವುದರ ಅವಶ್ಯಕತೆ ಇದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಇದು ಮಾನ್ಯ ಸದಸ್ಯರ ಹಾಗೂ ನಮ್ಮೆಲ್ಲರ ದೃಷ್ಟಿಯಿಂದ ಅವಶ್ಯಕತೆ ಇದೆ ಎಂದು ಕಂಡು ಬಂದಿದ್ದರಿಂದ ಕೂಡ ಅಲ್ಲಿ ೧೬೯ ಎಕರೆ ೯೪ ಗುಂಟೆ ಬ್ರಿಟೀಷರ ಕಾಲದಿಂದಲೂ ಮಿಸಲಾಗಿಟ್ಟಿದ್ದರೂ ಕೂಡ, ಅದರಲ್ಲಿ ಸುಮಾರು ೧ ಎಕರೆ ೪೭ ಗುಂಟೆ ಈಗಾಗಲೇ ಬ್ರಾಡ್ ಗೇಜ್ ಗೋಸ್ಕರ ರೈಲ್ವೆ ಇಲಾಖೆಯವರು ತೆಗೆದುಕೊಂಡಿದ್ದಾರೆ ಆದುದರಿಂದ ಆ ಕೆಲಸ ಕಾಲ ಕ್ರಮೇಣ ಆಗಬೇಕಾಗಿದೆ.

ಶ್ರೀ ಬಿ. ಇ. ರಾಮಯ್ಯ.—ಕಾಲ ಕ್ರಮೇಣ ಎಂದರೆ ಹೇಗೆ ? ಅಲ್ಲಿ ಈಗ ಸುಮ್ಮನೇ ೧೭೦ ಎಕರೆ ಜಮೀನು ಹಾಳಾಗಿ ಹೋಗುತ್ತಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅಧ್ಯಕ್ಷರೇ, ಸರ್ಕಾರದ ಮುಂದೆ ಒಂದು ಪ್ರಪೋಜಲ್ ಇದೆ. ೮-೮-೧೯೭೫ ರಲ್ಲಿ ಫ್ಲೈಯಿಂಗ್ ಸ್ಕೂಲ್ ನವರು ಹೋಗಿ ಸ್ಥಳವನ್ನು ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆ. ಅದು ಸರ್ಕಾರದವರ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಇ. ರಾಮಯ್ಯ.—ಕೇಂದ್ರ ಸರ್ಕಾರದವರ ಮೇಲೆ ಪ್ರಭಾವವನ್ನು ಬೀರಿ ಆ ಕೆಲಸವನ್ನು ಮಾಡಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅವಶ್ಯಕತೆ ಬಿದ್ದಾಗ ಬರೆಯೋಣ.

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳು ಮುಂಗಿದವು.

Message from the Chairman L. C.

(Announcement)

MADAM SPEAKER.—I have received the following message from the Chairman, Legislative Council.

> "As required underRule 106 of the Rules of Procedure and Conduct of Business of Legislative Council I send here with the Karnataka Municipalities Amendment Bill 1976 which has been agreed to by the Legislative Council without any amendments. The Bill has already been passed by the Legislative Assembly"

I have also received another message from the Chairman, Legislative Council which in as follows:—

> "As required under Rule 91 of the Rules of Procedure and Conduct of Business of Legislative Council I send herewith the following for the concurrence of the Legislative Assembly.
>
> (1) The Karnataka Civil Services (Classification and Scales of Pay of non-graduate Junior Engineers of the Public Works Department) (Second Amendment) Bill, 1976.